■ ಹನಿ



## ಮತ್ತಷ್ಟು ನಿಗೂಢ

ಪಿಂಕಿ ಪ್ರಾಮಾಣಿಕ್ ಮತ್ತೆ ಸುದ್ದಿಯಲ್ಲಿದ್ದಾಳೆ. ಆದರೆ ಇನ್ನು ಮುಂದೆ ಹೀಗೆ ಬರೆಯುವಂತಿಲ್ಲ; 'ಸುದ್ದಿಯಲ್ಲಿದ್ದಾನೆ' ಎಂದೇ ಬರೆಯಬೇಕು! ಹಾಗೆಂದು ಡಿಎನ್‌ಎ ಪರೀಕ್ಷೆಯ ವರದಿ ಹೇಳುತ್ತದೆ. 'ಪಿಂಕಿ ಹೆಣ್ಣಲ್ಲ, ಗಂಡು' ಎನ್ನುವುದು ಡಿಎನ್‌ಎ ಪರೀಕ್ಷೆಯ ಬಳಿಕ ಬಂದಿರುವ ತೀರ್ಪು. 2006ರ ಏಷ್ಯನ್ ಗೇಮ್ಸ್‌ನ 400 ಮೀಟರ್ ಮಹಿಳಾ ರಿಲೇ ಓಟದಲ್ಲಿ ಹಾಗೂ ಮೆಲ್ಬರ್ನ್ ಕಾಮನ್ವೆಲ್ತ್ ಕೂಟ ಓಟದಲ್ಲಿ ಬೆಳ್ಳಿ ಪದಕಗಳನ್ನು ಜಯಿಸಿ ಇಡೀ ದೇಶವೇ ಹೆಮ್ಮೆಯಿಂದ ಬೀಗುವಂತೆ ಮಾಡಿದ್ದ ಪಿಂಕಿ, ಈಗ ತನ್ನ ರೂಮ್‌ಮೇಟ್ ಅನಾಮಿಕ ಆಚಾರ್ಯಳ ಮೇಲೆ ಅತ್ಯಾಚಾರ ನಡೆಸಿದ ಆರೋಪದಲ್ಲಿ ಜೈಲು ಪಾಲಾಗುವುದು ಖಚಿತ ಎಂದು ಪಿಂಕಿಯ ವಿರೋಧಿಗಳು ಖುಷಿಯಾಗಿದ್ದಾರೆ. ಪಿಂಕಿ ಗೆದ್ದ ಅಂತರರಾಷ್ಟ್ರೀಯ ಪದಕಗಳನ್ನು ಹಿಂಪಡೆಯಲಾಗುತ್ತದೆಯೆ ಎನ್ನುವ ಪ್ರಶ್ನೆಯೂ ಈಗ ಎದ್ದಿದೆ.

ಆದರೆ ಪಿಂಕಿಯ ಪ್ರಕರಣ ಇಷ್ಟೊಂದು ಸುಲಭವಾಗಿ ಬಗೆಹರಿಯುವಂತೆ ಕಾಣುತ್ತಿಲ್ಲ. "ಪುರುಷ ಹಾರ್ಮೋನ್‌ಗಳು ಹೆಚ್ಚಿನ ಸಂಖ್ಯೆಯಲ್ಲಿವೆ ಎಂಬ ಕಾರಣಕ್ಕಾಗಿ ಸ್ತ್ರೀಯೊಬ್ಬಳು ಗಂಡಾಗಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಇನ್ನಷ್ಟು ಪರೀಕ್ಷೆಗಳ ಅಗತ್ಯವಿದೆ. ನಾಲ್ಕು ಸಲ ನನ್ನನ್ನು ಬಲವಂತವಾಗಿ ಪರೀಕ್ಷೆಗೆ ಒಳಪಡಿಸಲಾಗಿದೆ. ಇದಕ್ಕೆ ನನ್ನ ಒಪ್ಪಿಗೆ ಇರಲಿಲ್ಲ. ನನ್ನ ಮಾನಹಾನಿ ಮಾಡಿರುವ ಹಾಗೂ ಚಾರಿತ್ರ್ಯಕ್ಕೆ ಧಕ್ಕೆ ತಂದಿರುವ ಪೊಲೀಸ್ ಹಾಗೂ ಸರ್ಕಾರಿ ವಕೀಲರ ವಿರುದ್ಧ ಶೀಘ್ರವೇ ಮೊಕದ್ದಮೆ ಹೂಡುತ್ತೇನೆ" ಎಂದು ಪಿಂಕಿ ವಾದಿಸಿದ್ದಾರೆ.

ಡಿಎನ್‌ಎ ವರದಿಯಲ್ಲಿ ಬರೆದಿರುವುದೂ ಕುತೂಹಲಕರವಾಗಿದೆ. 'ಪಿಂಕಿ ಪುರುಷ ಎನ್ನುವುದು ಮೇಲ್ನೋಟಕ್ಕೆ ಸಾಬೀತಾಗಿದೆ. ಆದರೆ ಪಿಂಕಿ ಏಕಾಏಕಿ ಪುರುಷನಾಗಿ ಬದಲಾವಣೆಯಾಗಿರುವ ಸಾಧ್ಯತೆ ಇಲ್ಲ' ಎಂದು ವರದಿಯಲ್ಲಿ ವೈದ್ಯರು ನಮೂದಿಸಿದ್ದಾರೆ. ಅಂದರೆ ಈ ಹಿಂದೆ ಏಷ್ಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಕೂಟದಲ್ಲಿ ಭಾಗವಹಿಸುವಾಗ ಪಿಂಕಿ ಪುರುಷನೇ ಆಗಿದ್ದಳು ಎಂದು ಅರ್ಥವಾಗುತ್ತದೆ. ಹಾಗಿದ್ದರೆ ಆ ಸಮಯದಲ್ಲಿ ನಡೆದ ವೈದ್ಯಕೀಯ ಪರೀಕ್ಷೆಗಳು ಸುಳ್ಳು ಹೇಳಿವೆಯೆ? ಹಾಗೆ ಆಗಿನ ವೈದ್ಯರು 'ಸುಳ್ಳು' ಪ್ರಮಾಣಪತ್ರ ನೀಡಲು ಕಾರಣವೇನಿರಬಹುದು? ಅಂತರರಾಷ್ಟ್ರೀಯ ಕೂಟಗಳಲ್ಲಿ ಲಿಂಗಪರೀಕ್ಷೆ 1936ರಿಂದಲೇ ಜಾರಿಯಲ್ಲಿದೆ. ಅಂತರರಾಷ್ಟ್ರೀಯ ಕೂಟಗಳಲ್ಲಿ ಭಾರತೀಯ ಕ್ರೀಡಾಪಟುವೊಬ್ಬರ ಬಗ್ಗೆ ಹೀಗೆ ಸುಳ್ಳು ವರದಿ ನೀಡಲು ಸಾಧ್ಯವೆ? ಎನ್ನುವ ಪ್ರಶ್ನೆಗಳೂ ಉದ್ಭವಿಸುತ್ತವೆ. 'ಅಂತರರಾಷ್ಟ್ರೀಯ ಕೂಟಗಳಲ್ಲೂ ಪಿಂಕಿ ಮಹಿಳೆ ಎಂದೇ ಓಟಗಳಲ್ಲಿ ಭಾಗವಹಿಸಿರುವಾಗ ಈಗಿನ ವರದಿಯನ್ನು ನಂಬಲು ಹೇಗೆ ಸಾಧ್ಯ? ಇನ್ನೊಂದು ಸರಿಯಾದ ಪರೀಕ್ಷೆ ನಡೆಯಬೇಕು' ಎಂದು ಪಿಂಕಿಯ ಅಭಿಮಾನಿಗಳು ಈಗಾಗಲೆ ಒತ್ತಡ ಹೇರಿದ್ದಾರೆ. ಒಟ್ಟಾರೆ ಇಡೀ ಪ್ರಕರಣ ಇನ್ನಷ್ಟು ನಿಗೂಢವಾಗಿದೆ.

## ಸುನೀತಾ ದಾಖಲೆ




ಸುನೀತಾ ವಿಲಿಯಮ್ಸ್, ಹೊಸ ದಾಖಲೆ ನಿರ್ಮಿಸಿದ್ದಾರೆ. 'ಒಟ್ಟು 50 ಗಂಟೆ 40 ನಿಮಿಷಗಳ ಕಾಲ ಬಾಹ್ಯಾಕಾಶ ನಡಿಗೆ ನಡೆಸಿದ ಜಗತ್ತಿನ ಮೊದಲ ಮಹಿಳೆ' ಎನ್ನುವುದೀಗ ಅವರ ಖ್ಯಾತಿ. ಅತ್ಯಂತ ಹೆಚ್ಚು ಸಲ ಬಾಹ್ಯಾಕಾಶ ನಡಿಗೆ ನಡೆಸಿದ ದಾಖಲೆಯೂ ಆಕೆಯ ಹೆಸರಲ್ಲಿದೆ.

ಅಮೆರಿಕದ ನೌಕಾಪಡೆಯಲ್ಲಿ ಅಧಿಕಾರಿ ಆಗಿರುವ ಸುನೀತಾ ನಾಸಾದಲ್ಲಿ 1998ರಿಂದಲೂ ದುಡಿದು ತಮ್ಮದೇ ಆದ ಅನುಭವವನ್ನು ಗಳಿಸಿಕೊಂಡಿದ್ದಾರೆ. ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ ಮೊದಲು ತಂಡದ ಸದಸ್ಯೆಯಾಗಿ, ಬಳಿಕ ಫ್ಲೈಟ್ ಎಂಜಿನಿಯರ್ ಆಗಿ, ಈಗ ಕಮಾಂಡರ್ ಆಗಿ ಕೆಲಸ ಮಾಡಿರುವುದು ಸುನೀತಾ ಹೆಗ್ಗಳಿಕೆ. ಈಕೆ ಈವರೆಗೆ ಅತ್ಯಂತ ಹೆಚ್ಚು ಬಾಹ್ಯಾಕಾಶ ಯಾತ್ರೆಯ ಅನುಭವ ಪಡೆದ ಎರಡನೇ ಅಮೆರಿಕನ್ ಮಹಿಳೆಯೂ ಹೌದು. ಎರಡು ಬಾಹ್ಯಾಕಾಶ ಯಾತ್ರೆಗಳಲ್ಲಿ ಒಟ್ಟು 322 ದಿನಗಳ ಕಾಲ ವಾಸ ಮಾಡಿರುವ ಹೆಗ್ಗಳಿಕೆ ಈಕೆಯದ್ದು. ಮಹಿಳೆಯರು ಯಾವ ಕ್ಷೇತ್ರದಲ್ಲೂ ಪುರುಷರಿಗಿಂತ ಕಡಿಮೆ ಇಲ್ಲ ಎನ್ನುವುದು ಇದೀಗ ಮತ್ತೊಮ್ಮೆ ಸಾಬೀತಾದಂತಾಗಿದೆ. ಆಕೆಯ ತಂದೆ ಗುಜರಾತಿನಿಂದ ವಲಸೆ ಹೋದ ಅಮೆರಿಕನ್ ಎನ್ನುವ ಹಿನ್ನೆಲೆಯಲ್ಲಿ ಹೆಮ್ಮೆ ಪಟ್ಟುಕೊಳ್ಳಲು ಭಾರತೀಯರಾದ ನಮಗೂ ಸಂತಸ ಹೆಚ್ಚಿದೆ.

ಈ ಹಿಂದೆ ಹೀಗೆಯೇ ಬಾಹ್ಯಾಕಾಶ ಯಾತ್ರೆಯ ಸಾಧನೆ ಮಾಡಿದ ಭಾರತೀಯೆ ಕಲ್ಪನಾ ಚಾವ್ಲಾ ದುರಂತ ಅಂತ್ಯ ಕಂಡದ್ದು ಹಳೆಯ ವಿಷಯ. ಸುನೀತಾ ಅವರ ಹೊಸ ಸಾಧನೆ ಭಾರತೀಯ ಮಹಿಳೆಯರಲ್ಲೂ ಹೊಸ ಹುಮ್ಮಸ್ಸು ತುಂಬಿದೆ. ಭೌತ ವಿಜ್ಞಾನದಲ್ಲಿ ಅಮೆರಿಕದ ನೌಕಾ ಅಕಾಡೆಮಿಯಿಂದ ಪದವಿ ಪಡೆದು ಆ ಬಳಿಕ ಎಂಜಿನಿಯರಿಂಗ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಈಕೆ ತನ್ನ ಭಾರತೀಯ ಮೂಲವನ್ನು ಮರೆತಿಲ್ಲ. ಗಗನನೌಕೆಯಿಂದಲೇ ಭಾರತೀಯರಿಗೆ ದೀಪಾವಳಿ ಶುಭಾಶಯಗಳನ್ನು ಹಾರೈಸಿದ್ದೇ ಇದಕ್ಕೆ ಸಾಕ್ಷಿ. 2007ರಲ್ಲಿ ಒಮ್ಮೆ ಭಾರತಕ್ಕೆ ಬಂದಿದ್ದ ಸುನೀತಾ ಗಾಂಧೀಜಿಯವರ ಸಬರಮತಿ ಆಶ್ರಮಕ್ಕೆ ಭೇಟಿ ಕೊಟ್ಟಿದ್ದರು. ವಿಶ್ವ ಗುಜರಾತಿ ಸೊಸೈಟಿ ಅವರಿಗೆ ಸರ್ದಾರ್ ವಲ್ಲಭಭಾಯಿ ಪಟೇಲ್ ಪ್ರಶಸ್ತಿಯನ್ನೂ ನೀಡಿತ್ತು. 20 ವರ್ಷಗಳ ಹಿಂದೆಯೇ ಫೆಡರಲ್ ಪೊಲೀಸ್ ಸೇವೆಯಲ್ಲಿರುವ ಮೈಕೆಲ್ ಅವರನ್ನು ಮದುವೆಯಾಗಿರುವ ಸುನೀತಾಗೆ ಗಂಡನ ಬೆಂಬಲವೂ ಸಾಧನೆಗೆ ಸ್ಫೂರ್ತಿ ನೀಡಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65